ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಅಂತರ್ಜಲ ಸಂರಕ್ಷಣೆ ಬಗ್ಗೆ

ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು) –

1067 (1259) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯದಲ್ಲಿ ಅಂತರ್ಜಲ ಸಂರಕ್ಷಣೆ ದೃಷ್ಟಿಯಿಂದ ಯಾವ್ಯಾವ ಮರಗಳನ್ನು ಬೆಳೆಯಬಾರದೆಂದು ಸರ್ಕಾರ ಕಾಯ್ದೆ ಅಥವಾ ಷರತ್ತು ವಿಧಿಸಿದೆ; (ಪ್ರತಿ ನೀಡುವುದು)

(ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಎಷ್ಟು ಎಕರೆ ವಿಸ್ತೀರ್ಣದಲ್ಲಿ ಇಂತಹ ಮರಗಳನ್ನು ಬೆಳೆಯಲಾಗಿದೆ; (ಗ್ರಾಮ ಮತ್ತು ವಿಸ್ತೀರ್ಣವಾರು ವಿವರ ನೀಡುವುದು)

(ಇ) ಸೋಂಪುರ ಹೋಬಳಿಯ ಕಾಸರಘಟ್ಟ ಗ್ರಾಮ ವ್ಯಾಪ್ತಿಯ ಎಷ್ಟು ಎಕರೆ ವಿಸ್ತೀರ್ಣದಲ್ಲಿ ಇಂತಹ ಮರಗಳನ್ನು ಬೆಳೆಯಲಾಗಿದೆ; (ಹೆಸರು ಮತ್ತು ವಿಸ್ತೀರ್ಣವಾರು ವಿವರ ನೀಡುವುದು) ಕಳೆದ ಮಾರ್ಚ್‌ನಿಂದ ಈ ದಿನಾಂಕದವರೆಗೂ ಯಾವ ರೈತರ ಎಷ್ಟು ಎಕರೆ ವಿಸ್ತೀರ್ಣದ ಜಮೀನುಗಳಲ್ಲಿ ಇಂತಹ ಮರಗಳನ್ನು ತೆಗೆಯಲಾಗಿದೆ; ಇನ್ನೂ ಯಾವ ರೈತರ ಎಷ್ಟು ವಿಸ್ತೀರ್ಣದ ಜಮೀನುಗಳಲ್ಲಿ ಮರಗಳನ್ನು ತೆಗೆಯಬೇಕಾಗಿದೆ; (ಹೆಸರು, ವಿಸ್ತೀರ್ಣವಾರು ವಿವರ ನೀಡುವುದು)

(ಈ) ಸದರಿ ಗ್ರಾಮ ವ್ಯಾಪ್ತಿಯಲ್ಲಿ ಇಂತಹ ಮರಗಳನ್ನು ಕಡ್ಡಾಯವಾಗಿ ತೆರವುಗೊಳಿಸಿ ರೈತರಿಗೆ ಅಂತರ್ಜಲದ ಅನುಕೂಲ ಕಲ್ಪಿಸಲು ಈವರೆಗೂ ಕೈಗೊಂಡಿರುವ ಕ್ರಮಗಳಾವುವು? (ವಿವರ ಮತ್ತು ಯಾವ ನಿಗಧಿತ ದಿನಾಂಕದೊಳಗೆ ಮರಗಳನ್ನು ತೆರವುಗೊಳಿಸಲಾಗುವುದು)